ಇಂದು ದಿಃ**08-06-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ.ಪಿ.ಎಂ ವಕೀಲರಿಂದ ವಾದಿಯರ ಪರಃ**

ನಾನು ಐ.ಟಿ.ಐ ಓದಿರುತ್ತೇನೆ. ವಾದಿಯರು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ನನ್ನ ತಕರಾರಿನಲ್ಲಿ ತಿಳಿಸಿದ ಆಸ್ತಿ ಮತ್ತು ವಾದಪತ್ರದ ಶೆಡ್ಯೂಲ್ ಎ ಆಸ್ತಿ ಎರಡೂ ಒಂದೇ ಎಂದರೆ ಸರಿ. ವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ನನಗೆ ಈ ವಿಷಯ ಮೊದಲಿನಿಂದಲೂ ಗೊತ್ತು ಎಂದರೆ ಸರಿ. 1 ನೇ ಪ್ರತಿವಾದಿ ದಾವಾ 'ಎ' ಜಮೀನನ್ನು ನಂದೀಶ್ವರ ಕ್ಯಾಂಪ್ ನ ಒಬ್ಬರಿಗೆ ಲಾವಣಿಗೆ ಕೊಟ್ಟಿದ್ದರು, ನನಗೆ ಅವರ ಹೆಸರು ಗೊತ್ತಿಲ್ಲ. ಲಾವಣಿಗೆ ಸಂಬಂಧಿಸಿದಂತೆ ನಾನು ದಾಖಲೆ ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ನಾನು ನನ್ನ ತಕರಾರಿನಲ್ಲಿ ದಾವಾ ಎ ಜಮೀನಿಗೆ ನೀರಿನ ವ್ಯವಸ್ಥೆ ಇಲ್ಲ ಮತ್ತು ಅದು ವ್ಯವಸಾಯಕ್ಕೆ ಯೋಗ್ಯ ಇಲ್ಲ ಎಂದು ತಿಳಿಸಿದ್ದು, ಈ ಕುರಿತು ನಾನು ದಾಖಲೆ ಹಾಜರುಪಡಿಸಿಲ್ಲ. ಸದರಿ ಜಮೀನು ವ್ಯವಸಾಯಕ್ಕೆ ಯೋಗ್ಯ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನೀರಿನ ವ್ಯವಸ್ಥೆ ಇಲ್ಲದೇ ಇದ್ದ ಕಾರಣ, ಖರೀದಿಯ ನಂತರ ಹೊಳೆಯಿಂದ ಪಂಪಸೆಟ್ ಮೂಲಕ ನೀರಿನ ಸೌಕರ್ಯ ಮಾಡಿ ಜಮೀನನ್ನು ಮಟ್ಟ ಮಾಡಿದ್ದೇನೆ ಎಂದು ಹೇಳುತ್ತಾರೆ. ಈ ಜಮೀನನ್ನು ಲಾವಣಿಗೆ ಕೊಟ್ಟಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಖರೀದಿಯ ಮೊದಲು 1 ನೇ ಪ್ರತಿವಾದಿ ತನ್ನ ಹೆಸರಿಗೆ ಇದ್ದ ಪಣಿ ಮತ್ತು ಮುಟೇಷನ್ ಕೊಟ್ಟೀನು. ಹಿರಿಯರು ಊರಿನಲ್ಲಿ ಮಾತುಕತೆ ಮಾಡಿದರು. ಮೂಲತಃ ಈ ಜಮೀನು ಯಾರ ಹೆಸರಿಗೆ ಇತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಹೆಸರಿಗೆ ಇದೆ ಎಂದು ಹೇಳಿದ್ದರು. ಸಾಕ್ಷಿಗೆ ನಿ.ಪಿ-7 ನ್ನು ತೋರಿಸಿ

ಅದರ ಪ್ರಕಾರ ಈ ಆಸ್ತಿ ವೀರಚಾರಿ ಈತನಿಗೆ ಸೇರಿದ ಆಸ್ತಿ ಎಂದು ಇದೆ ಎಂದರೆ ಸಾಕ್ಷಿ ಇರಬಹುದು ಆದರೆ 1 ನೇ ಪ್ರತಿವಾದಿ ತನ್ನ ಹೆಸರಿಗೆ ಇರುವ ಪಹಣಿ ತೋರಿಸಿದನು ಎಂದು ಹೇಳುತ್ತಾರೆ. ಈ ಆಸ್ತಿ ಪೌತಿ ವಾರಸ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಇರಬಹುದು. ವೀರಚಾರಿ ತೀರಿಕೊಂಡ ನಂತರ, 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳಿಗೆ ಈ ದಾವಾ ಎ ಜಮೀನಿನಲ್ಲಿ ಹಕ್ಕು ಮತ್ತು ಭಾಗಾಂಶದ ಹಕ್ಕು ಇತ್ತು ಎಂದರೆ ಸರಿಯಲ್ಲ.

ರೂ.4 ಲಕ್ಷ 80 ಸಾವಿರಕ್ಕೆ ಖರೀದಿ ವ್ಯವಹಾರ ಆಗಿರುತ್ತೆದೆ. ರೂ.4 ಲಕ್ಷ 80 ಸಾವಿರಕ್ಕೆ ಖರೀದಿ ಆಗಿರುವ ಬಗ್ಗೆ ಕ್ರಯಪತ್ರ ಹಾಜರುಪಡಿಸಿದ್ದೇನೆ. ಈ ರೂ.4 ಲಕ್ಷ 80 ಸಾವಿರದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕ್ರಯಪತ್ರ ರೂ.2 ಲಕ್ಷ 46 ಸಾವಿರಕ್ಕೆ ಆಗಿರುತ್ತದೆ ಎಂದು ಹೇಳುತ್ತಾರೆ. ರೂ.4 ಲಕ್ಷ 80 ಸಾವಿರದ ಮೌಲ್ಯ ಕ್ರಯಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಕ್ರಯಪತ್ರದಲ್ಲಿ ರೂ.2 ಲಕ್ಷ 46 ಸಾವಿರ ಬರೆಯಿಸಿದ್ದು ಆದರೆ ಸಾಕ್ಷಿದಾರರ ಸಮಕ್ಷಮ ರೂ.4 ಲಕ್ಷ 80 ಸಾವಿರ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ರೂ.4 ಲಕ್ಷ 80 ಸಾವಿರ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ರೂ.1 ಲಕ್ಷ 60 ಸಾವಿರ ಪ್ರತಿ ಎಕರೆಗೆ ಎಂದು ವ್ಯವಹಾರ ಆದ ಬಗ್ಗೆ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿದ್ದು, ಇದನ್ನು ಕ್ರಯದ ಕರಾರುಪತ್ರದಲ್ಲಿ ನಮೂದು ಮಾಡಿಲ್ಲ. ರೂ.4 ಲಕ್ಷ 80 ಸಾವಿರಕ್ಕೆ ಈ ಜಮೀನಿನ ವ್ಯವಹಾರ ಆಗಿರಲಿಲ್ಲ ಎಂದರೆ ಸರಿ ಯಲ್ಲ. ಈ ಬೆಲೆಗೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಖರೀದಿ ವ್ಯವಹಾರ ಆಗಬೇಕದಾರೆ 1 ಮತ್ತು 2 ನೇ ವಾದಿಯರು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರ ಮನೆಯಲ್ಲಿ ವ್ಯಾಪಾರ ಆಗಿದ್ದು ಇದ್ದರು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ಕ್ರಯಪತ್ರಕ್ಕೆ ವಾದಿಯರ ಸಹಿ ಪಡೆಯಲು

ಕೇಳಿದೆನು, ಆಗ 1 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಜಮೀನು ಇದೆ, ಅವರ ಸಹಿ ಬೇಡ ಎಂದು ಹೇಳಿದನು, ಊರಿನವರು ಇರಲಿ ಎಂದು ಹೇಳಿದ ಕಾರಣ ಪಡೆಯಲಿಲ್ಲ ಎಂದು ಹೇಳುತ್ತಾರೆ. ಆ ರೀತಿ 1 ನೇ ಪ್ರತಿವಾದಿ ಅಥವಾ ಬೇರೆಯವರು ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಹಿ ಬೇಡ ಎಂದು ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀರಾವರಿ ಇಲಾಖೆಯಿಂದ ಪರವಾನಿಗೆ ಪಡೆದು ಪಂಪ್ಸೆಟ್ ಹಾಕಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಮೇಲೆ ಸಾಲ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ವಿ.ಎಸ್.ಎಸ್ ಸಂಘ ಮತ್ತು ಗ್ರಾಮೀಣ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೇನೆ ಎಂದು ಹೇಳುತ್ತಾರೆ. ಈ ಜಮೀನನ್ನು ಖರೀದಿ ಮಾಡಲು ಮೊದಲು ಯಾವುದೇ ವಕೀಲರಿಂದ ಕಾನೂನು ಸಲಹೆ ಪಡೆದಿಲ್ಲ.

ಈ ದಾವಾ ಜಮೀನಿನಲ್ಲಿ ವಾದಿಯರಿಗೆ ಹಿಸ್ಸೆ ಇದ್ದ ಬಗ್ಗೆ ನನಗೆ ಖರೀದಿ ಮಾತುಕತೆಯ ಸಮಯದಲ್ಲಿ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಡಿ-8 ಕ್ಕೂ ಮತ್ತು ದಾವಾ ಎ ಜಮಿನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಆಸ್ತಿ ಮಾರಿ ಖರೀದಿ ಹಿಡಿದ್ದೇನೆ ಎಂದು ಹೇಳುತ್ತಾರೆ. ಈ ಕ್ರಯಪತ್ರಕ್ಕೂ, ದಾವಾ ಎ ಶೆಡ್ಯೂಲ್ ಆಸ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-7 ನ್ನು ಈ ದಾವೆಗೆ ನಾನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-9 ರಿಂದ 15 ನ್ನು ನಾನು ಈ ದಾವೆಯ ಸಂಬಂಧ ಸೃಷ್ಠಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಶೆಡ್ಯೂಲ್ ಎ ಆಸ್ತಿಯಲ್ಲಿ ಪಾಲು ಇದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಶೆಡ್ಯೂಲ್ ಎ ಜಮೀನು ವಾದಿಯರ ತಾತನ ಆಸ್ತಿ ಎಂದರೆ ಗೊತ್ತಿಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ಒಂದು ವೇಳೆ ವಾದಿಯರಿಗೆ ಶೆಡ್ಯೂಲ್ ಎ ಆಸ್ತಿಯಲ್ಲಿ ಹಿಸ್ಸೆ ಇದೆ ಎಂದು ಕಂಡು ಬಂದರೆ ಅದನ್ನು ಶೆಡ್ಯೂಲ್ ಬಿ ಆಸ್ತಿಯಲ್ಲಿ ಸರಿ ಮಾಡಿಕೊಡಬೇಕು ಎಂದು ಕೇಳಿಕೊಂಡಿದ್ದೇನೆ ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಆದರೆ ಜಮೀನು ಖರೀದಿ ಮಾಡಿದ್ದೆನು ಎಂದು ಹೇಳುತ್ತಾರೆ. ನನ್ನ ಪ್ರತಿವಾದ ಪತ್ರದ ಮತ್ತು ಸಾಕ್ಷಿ ಪ್ರಮಾಣಪತ್ರದ ಮಾಹಿತಿಗಳನ್ನು ನಾನು ವಕೀಲರಿಗೆ ನೀಡಿದ್ದೇನೆ ಎಂದರೆ ಸರಿ.

ಶೆಡ್ಯೂಲ್ ಬಿ ಮನೆ 1 ನೇ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿಯರು 1 ಮತ್ತು 2 ನೇ ಪ್ರತಿವಾದಿಯರಿಗೆ ಮೊದಲಿನಿಂದಲೂ ಹಿಸ್ಸೆಕೊಡಿ ಎಂದು ಕೇಳುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ16-06-2022 ರಂದು ವಾದಿಯರು ಹಿಸ್ಸೆ ಕೇಳಿದಾಗ 1 ಮತ್ತು 2 ನೇ ಪ್ರತಿವಾದಿಯರು ನಿರಾಕರಿಸಿದಾಗ ಈ ದಾವೆ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿ 2002 ರಲ್ಲಿಯೇ ಖರೀದಿ ಮಾಡಿದಾಗ ಅವರಿಗೆ ಗೊತ್ತಿತ್ತು ಎಂದು ಹೇಳುತ್ತಾರೆ. ಆಗ ವಾದಿಯರ ಗಮನಕ್ಕೆ ದಿನಾಂಕಃ25-09-2004 ರ ಕ್ರಯಪತ್ರ ಬಂತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಹಣಕೊಟ್ಟಿರುತ್ತೇವೆ, 1 ನೇ ವಾದಿ ಆಕೆಯ ತಂದೆಗೆ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಕೊಟ್ಟ ಹಣವನ್ನು ತನ್ನ ಬಳಿ ಇಟ್ಟುಕೊಂಡಳು ಎಂದು ಹೇಳುತ್ತಾರೆ. ಈ ವಿಷಯವನ್ನು ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿಲ್ಲ. ಯಾವುದೇ ಕ್ರಯದ ಹಣವನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪರಮೇಶ್ವರಯ್ಯ ನನಗೆ ಸಂಬಂಧ ಇಲ್ಲ. ಪರಮೇಶ್ವರಯ್ಯ ಅವರಿಗೆ ಪರಿಚಯ ಇರುವ ವ್ಯಕ್ತಿ. ಶಿವುಮೂರ್ತಯ್ಯ ಈತನನ್ನು ಸಹ ಅವರೇ ವ್ಯಾಪಾರಕ್ಕೆ ಕರೆ ತಂದಿದ್ದರು. ವಾದಿಯರಿಗೆ ಹಿಸ್ಸೆ ಸಿಗಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.